<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.</u>

**ಸಿ.ಸಿ. ಸಂಃ 747/2021**

| | | |
|---|---|---|
| ಸಾಕ್ಷಿಯ ಹೆಸರುಃ | ಜೀವನ್ | ಫ್ರಾಸಾಃಃ 2 |
| ತಂದೆಯ ಹೆಸರುಃ | ಮಾದೇಗೌಡ ಡಿ. | ಚಾಸಾಃಃ 7 |
| ವಯಸ್ಸುಃ | 30 ವರ್ಷ | ಪ್ರಮಾಣೀಕರಿಸಿದ ದಿಃ 28.11.2025. |
| ಉದ್ಯೋಗಃ | ವ್ಯವಸಾಯ | |
| ವಾಸ ಸ್ಥಳಃ | ಚಿಟ್ಟೇನನಳ್ಳಿ ಗ್ರಾಮ, ಹುಣಸೂರು ತಾಃ | |

<u>ಮುಖ್ಯ ವಿಚಾರಣೆಃ ಸಸಅ ರಿಂದಃ</u>

1. ನನಗೆ ಆರೋಪಿಯ ಪರಿಚಯವಿದೆ. ಆತ ನನ್ನ ದೊಡ್ಡಪ್ಪನ ಮಗ. ಚಾಸಾ -2 ನನ್ನ ಚಿಕ್ಕಪ್ಪ. ಈ ಪ್ರಕರಣದ ವಿಷಯ ನನಗೆ ಗೊತ್ತಿಲ್ಲ. ಚಾಸಾ-1 ನನ್ನ ತಂದೆ. ಅವರು ಈಗ 5 ವರ್ಷದ ಹಿಂದೆ ಮೃತರಾಗಿರುತ್ತಾರೆ. ನನಗೆ ಈ ಪ್ರಕರಣದ ವಿಚಾರ ಗೊತ್ತಿಲ್ಲ. ನಾನು ಯಾವುದೇ ಗಲಾಟೆಯನ್ನು ಕಣ್ಣಾರೆ ಕಂಡಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

**(ಈ ಸಮಯದಲ್ಲಿ ಸಹಾಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು.)**

<u>ಪಾಟೀ ಸವಾಲುಃ ಸಸಅ ರವರಿಂದಃ</u>

1. ದಿನಾಂಕ 21.10.2020 ರಂದು ಸಂಜೆ 7.30 ಗಂಟೆಯ ಸಮಯದಲ್ಲಿ, ನಾನು, ನನ್ನ ತಂದೆ ಮೃತ ಚಾಸಾ - 1 ಹಾಗೂ, ನನ್ನ ಅಕ್ಕ ರೇಷ್ಮಾ ರವರು ಹಾಗೂ ಅವರ ಪತಿ ಪುಟ್ಟೇಗೌಡ ರವರು ಮನೆಯಲ್ಲಿ ಮಾತಾಡುತ್ತಾ ಕುಳಿತಿದ್ದಾಗ, ಮನೆಯ ಮುಂದಿನ ರಸ್ತೆಯಲ್ಲಿ ಆರೋಪಿಯು ಬರುತ್ತಿರುವಾಗ, ನಮ್ಮ ಮನೆಯ ಕಿಟಕಿಗೆ ಕಟ್ಟಿ ಹಾಕಿದ್ದ ಜಗುಲಿಯ ಮೇಲಿದ್ದ ನಾಯಿಯು ಆರೋಪಿಯನ್ನು ಕಂಡು ಬೋಗಳುತ್ತಿತ್ತು ಎಂದರೆ ಸರಿಯಲ್ಲ. ಇದರಿಂದ ಆರೋಪಿಯು ಚಾಸಾ.1 ರವರ ಮನೆಯ ಬಾಗಿಲ ಮುಂದೆ ನಿಂತು

ಚಾಸಾ.1 ರವರಿಗೆ ಬೋಳಿಮಗನೇ, ಸೂಳೇಮಗನೇ ಇಲ್ಲಿ ನಾಯಿಯನ್ನು ಯಾಕೆ ಕಟ್ಟಿ ಹಾಕಿದ್ದೀಯಾ ದಾರಿಯಲ್ಲಿ ಹೋಗುವವರನ್ನು ನೋಡಿ ಬೊಗಳುತ್ತದೆ ಎಂದು ಬೈಯುತ್ತಿದ್ದನು ಎಂದರೆ ಸರಿಯಲ್ಲ.

2. ಆಗ ಚಾಸಾ - 1 ರವರು ಯಾಕೆ ಬೈಯುತ್ತೀಯಾ ಹೋಗು ಎಂದಾಗ ಮರು ಮಾತಿಗೆ ಮಾತು ಬೆಳೆದು, ಆರೋಪಿಯು ಮನೆಯಿಂದ ಕ್ರಿಕೇಟ್ ಬ್ಯಾಟನ್ನು ತಂದು ಚಾಸಾ.1 ರವರು ಮನೆಯ ಬಾಗಿಲಿಗೆ ಬಡಿದರು ಎಂದರೆ ಸರಿಯಲ್ಲ. ಆಗ ಚಾಸಾ.1 ರವರು ಮನೆಯಿಂದ ಹೊರಗಡೆ ಬಂದು ಬಾಗಿಲನ್ನು ಯಾಕೆ ಹೊಡೆಯುತ್ತೀಯಾ ಎಂದು ಕೇಳುತ್ತಿರುವಾಗ, ಆರೋಪಿ ಚಾಸಾ.1 ರವರ ತಲೆಗೆ ಕ್ರಿಕೆಟ್ ಬ್ಯಾಟಿನಿಂದ ಹೊಡೆದು ರಕ್ತಗಾಯಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಆಗ ಚಾಸಾ.1 ರವರು ಕೆಳಗೆ ಬಿದ್ದಾಗ, ಆರೋಪಿ ತನ್ನ ಕಾಲಿನಿಂದ ಒದ್ದರು ಎಂದರೆ ಸರಿಯಲ್ಲ. ನಂತರ ಚಾಸಾ.1 ರವರಿಗೆ ಕೊಲೆ ಮಾಡುವುದಾಗಿ ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ನಂತರ ಚಾಸಾ - 1 ರವರನ್ನು ನಾನು ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಅಲ್ಲಿಂದ ಮೈಸೂರಿನ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ ನಾನು ಪೊಲೀಸರ ಮುಂದೆ ಈಗ ಓದಿ ಹೇಳಿದಂತೆ ನಿಪಿ -3 ರಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

3. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಆರೋಪಿತರ ವಕೀಲರಿಂದಃ</u>

ಇಲ್ಲ.

ಮರು ವಿಚಾರಣೆಃ ಇಲ್ಲ.

<u>ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು</u>
<u>ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.</u>

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ